## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ33/2018 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ **-1**

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆ:ಗಂಡ | ಃ | ನಾಗೇಂದ್ರಪ್ಪ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ೧೭.೦೧.೨೦೨೦

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನನಗೆ ಚಾಸಾ-8 ರಿಂದ 15 ರವರ ಪರಿಚಯ ಇರುತ್ತದೆ. ಈ ಪ್ರಕರಣದಲ್ಲಿರುವ ಮೃತ ಶ್ರೀಶೈಲ ಮತ್ತು ಶಿವಾನಂದ ನನ್ನ ತಮ್ಮಂದಿರು. ಅವರು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ದಿನಾಂಕ: 03.05.2017 ರಂದು ಶ್ರೀಶೈಲ ಮತ್ತು ಶಿವಾನಂದರವರು ನಮ್ಮ ಮನೆಯಿಂದ ಮುಂಜಾನೆ 6.30 ಗಂಟೆಗೆ ಹೊಲಕ್ಕೆ ಹೋಗುತ್ತಿದ್ದರು. ನನಗೆ ನಾಗಣ್ಣಾ ಪಾಳೆ ಎಂಬುವವರು 7.00 ಗಂಟೆಗೆ ಫೋನ್ ಮಾಡಿ ತಿಳಿಸಿದ್ದೇನೆಂದರೆ, ಕಡಗಂಚಿಯ ಎನ್.ಡಿ. ಪೆಟ್ರೋಲ್ ಪಂಪ್ ಹತ್ತಿರ ನಿನ್ನ ತಮ್ಮಂದಿರಿಗೆ ಅಪಘಾತವಾಗಿದೆ ಎಂದು ತಿಳಿಸಿದರು. ಆರೋಪಿಯ ಕಾರಿನ ಸಂಖ್ಯೆ ಕೆ.ಎ.-32-ಸಿ-6448 ರೊಂದಿಗೆ ನನ್ನ ತಮ್ಮ ಚಲಾಯಿಸುತ್ತಿರುವ ದ್ವಿ-ಚಕ್ರ ವಾಹನವು ಅಪಘಾತವಾಗಿತ್ತು. ಆರೋಪಿಯು ತನ್ನ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಡಿಕ್ಕಿಪಡಿಸಿರುತ್ತಾನೆ. ನಾನು, ಚಾಸಾ-8 ರಿಂದ 11 ರವರನ್ನು ಕರೆದುಕೊಂಡು ಸ್ಥಳಕ್ಕೆ ಹೋಗಿ ನೋಡಲಾಗಿ, ಇಬ್ಬರಿಗೂ ಕಿವಿಯಿಂದ ರಕ್ತ ಬಂದಿತ್ತು, ಬಲಗಾಲು ಮತ್ತು ಬಲಗಣ್ಣಿಗೆ ರಕ್ತಗಾಯವಾಗಿತ್ತು. ಶ್ರೀಶೈಲ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆತನನ್ನು ಸರಕಾರಿ ಆಸ್ಪತ್ರೆ ಕಲಬುರಗಿಗೆ ಸೇರಿಸಿದ್ದು, ಶಿವಾನಂದನಿಗೆ ಯುನೈಟೆಡ್ ಆಸ್ಪತ್ರೆ ಕಲಬುರಗಿಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲಿ ನಾನು ಪೋಲಿಸರಿಗೆ ಈ ಬಗ್ಗೆ ದೂರನ್ನು ಸಲ್ಲಿಸಿದ್ದೇನೆ. ಕಾರಿನ ಚಾಲಕನ ಹೆಸರು ರಾಘವೇಂದ್ರ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಪೋಲಿಸರು ನನಗೆ ಎರಡು ಸಲ ಠಾಣೆಗೆ ಕರೆಸಿದ್ದರು, ಒಂದು ಸಲ ಆರೋಪಿಯನ್ನು ತೋರಿಸಿದ್ದರು. ಇನ್ನೊಂದು ಸಲ ಬಂದಾಗ ಶಿವಾನಂದ ಮೃತಪಟ್ಟ ನಂತರ ಪುರವಣಿ ಹೇಳಿಕೆಯನ್ನು ಪಡೆದಿರುತ್ತಾರೆ. ನಾನು

ಪೋಲಿಸರಿಗೆ ಅಪಘಾತದ ಸ್ಥಳವನ್ನು ತೋರಿಸಿದ್ದು, ಅವರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಗೆ ಈಗ ಆರು ಭಾವಚಿತ್ರಗಳನ್ನು ತೋರಿಸಲಾಗಿ ಸದರಿ ಅಪಘಾತದಲ್ಲಿ ಆರೋಪಿಯು ಚಲಾಯಿಸುತ್ತಿದ್ದ ಕಾರನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಮೃತ ಶ್ರೀಶೈಲ ಮತ್ತು ಶಿವಾನಂದರವರು ಹೋಗುತ್ತಿದ್ದ ದ್ವಿ-ಚಕ್ರ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ಆ ದಿನ ನಾನು ಠಾಣೆಯಲ್ಲಿ ನೋಡಿದ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾನೆ. ಸದರಿ ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿರುತ್ತದೆ. ಆತನು ಅತಿವೇಗವಾಗಿ ಅಜಾಗರುಕತೆಯಿಂದ ಕಾರನ್ನು ಓಡಿಸಿದ್ದರಿಂದ ಈ ಅಪಘಾತವಾಗಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ**

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.